# ಸಿಪಿಸಿಆರ್‌ಐಗೆ ಶತಮಾನೋತ್ಸವ ಸಂಭ್ರಮ

HG dt. 27/2/16

**ಕಾಸರಗೋಡು:** ಕಾಸರಗೋಡು ಸಿಪಿಸಿಆರ್‌ಐ ಸಂಸ್ಥೆಯು ಶತಮಾನೋತ್ಸದ ಸಂಭ್ರಮದಲ್ಲಿದೆ. 1916ರಲ್ಲಿ ಕೇಂದ್ರ ತೆಂಗಿನಕಾಯಿ ಸಂಶೋಧನಾ ಕೇಂದ್ರವಾಗಿ ಈ ಸಂಸ್ಥೆಯನ್ನು ಆರಂಭಿಸಲಾಯಿತು. ಶತಮಾನೋತ್ಸವದ ಅಂಗವಾಗಿ ಸಿಪಿಸಿಆರ್‌ಐ ನೇತೃತ್ವದಲ್ಲಿ ಒಂದು ವರ್ಷ ಕಾಲ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾರ್ಚ್ 12ರಂದು ಸಿಪಿಸಿಆರ್‌ಐಯಲ್ಲಿ ಕೇಂದ್ರ ಕೃಷಿ ಖಾತೆ ಸಚಿವ ರಾಧಾಮೋಹನ್ ಸಿಂಗ್ ನೆರವೇರಿಸುವರು ಎಂದು ಸಂಸ್ಥೆಯ ನಿರ್ದೇಶಕ ಡಾ.ಪಿ.ಚೌಡಪ್ಪ ತಿಳಿಸಿದ್ದಾರೆ. ಉದ್ಘಾಟನೆಯ ಅಂಗವಾಗಿ ಕಿಸಾನ್ ಮೇಳವೂ ನಡೆಯಲಿದೆ.

ವಿವಿಧ ಹಂತಗಳಲ್ಲಾಗಿ ಸಿಪಿಸಿಆರ್‌ಐ ಅಭಿವೃದ್ಧಿಪಡಿಸಿದ 100 ತೆಂಗಿನಸಸಿಗಳನ್ನು 100 ಮಂದಿ ಕೃಷಿಕರು ನೆಡುವರು. ಇದನ್ನು ಸೆಂಚುರಿ ತೆಂಗು ಪಾರ್ಕ್ ಆಗಿ ಮಾರ್ಪಡಿಸಲಾಗುವುದು.



- **ಮಾ.12ರಂದು ಕೇಂದ್ರ ಕೃಷಿ ಸಚಿವರಿಂದ ಉದ್ಘಾಟನೆ**
- **ಸೆಂಚುರಿ ತೆಂಗು ಪಾರ್ಕ್**
- **ಕಿಸಾನ್ ಮೇಳ**

ಸಿಪಿಸಿಆರ್‌ಐಯ 100ನೇ ವರ್ಷದ ಇತಿಹಾಸವನ್ನು ಒಳಗೊಂಡ ಸ್ಮರಣಿಕೆ ಹಾಗೂ ಲಾಂಛನವನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ.

ಸಿಪಿಸಿಆರ್‌ಐಯಲ್ಲಿ ನಡೆಯಲಿರುವ ಕಿಸಾನ್ ಮೇಳದಲ್ಲಿ 2000 ಮಂದಿ ಕೃಷಿಕರು ಭಾಗವಹಿಸುವ ನಿರೀಕ್ಷೆಯಿದೆ. ಕಿಸಾನ್ ಮೇಳ, ವಿಜ್ಞಾನಿ-ಕೃಷಿಕರ ಇಂಟರ್ಫೇಸ್ ಸಹಿತ ನಾನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಿಸಾನ್ ಮೇಳದಲ್ಲಿ ಪಾಲ್ಗೊಳ್ಳುವವರು ತಮ್ಮ ಮಾಹಿತಿಗಳನ್ನು ಸಮೀಪದ ಕೃಷಿ ಭವನದಲ್ಲಿ ನೀಡಬೇಕು. ಹೆಚ್ಚಿನ ವಿವರಗಳಿಗೆ ಸಿಪಿಸಿಆರ್‌ಐ ಸಮಾಜ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ.ಸಿ.ತಂಬಾನ್ (9447439503) ಅವರನ್ನು ಸಂಪರ್ಕಿಸಲು ಕೋರಲಾಗಿದೆ.